ಮುರ್ಡೇಶ್ವರದಲ್ಲಿ ಹಾರಿಕೊಂಡ... ಚಿಕ್ಕಪ್ಪ ಅಘನಾಶಿನಿಯಲ್ಲಿ ಜೀವಕೊಟ್ಟ. ಬದುಕುವ ತಾಕತ್ತಿಲ್ಲದವರು... ನೀರಿಲ್ಲದವರು...' ಕೊನೆಯ ಮಾತಿನಿಂದ ರಾಮದಾಸನಿಗೆ ಸರ್ರನೇ ಸಿಟ್ಟು ಮಸ್ತಕಕ್ಕೇರಿ 'ಏ... ಏನಂದೆ ಏನು ಮಾತಾಡಿದೆ ಅಂತ ಇಷ್ಟು ಬೊಬ್ಬೆ ಹೊಡಿಯುತ್ತೀ... ಅಷ್ಟಕ್ಕೂ ಇದ್ದ ಸಂಗತಿಯನ್ನಲ್ಲವೇ ಹೇಳಿದ್ದು...' ಎಂದು ಚೀರಾಡಿದಾಗ ನಾಗತ್ತೆ ಥಕಥೈ ಕುಣಿದಳು. ಇಬ್ಬರಿಗೂ ಮಾತಿಗೆ ಮಾತಾಯಿತು. ಮನೆಯಲ್ಲಾರೂ ಇರಲಿಲ್ಲ. ಕೊನೆ ಕೊನೆಗೆ ನಾಗತ್ತೆಯ ಮಾತುಗಳು, ಅಪ್ಪ, ಅಮ್ಮ, ಚಿಕ್ಕಪ್ಪ ಮುಂತಾಗಿ ವಂಶಾವಳಿಗಳನ್ನು ಉದ್ಧಾರ ಮಾಡಲು ಶುರು ಮಾಡಿದಾಗ ಅವಳಿಗೆ ತಿರುಗಿ ಒಯ್ಯಲು ಶಬ್ದ ಸಾಲದೇ ಬಾಯಿ ಕಟ್ಟಿದ ಹಾಗಾಯಿತು. ಆದರೂ ಕೊನೆಗೆ 'ಏನಾದರೂ ಬಾಯಿಗೆ ಬಂದದ್ದು ಮಾತಾಡಿದರೆ ನೋಡು... ಈಗಲ್ಲದಿದ್ದರೂ ಇನ್ನೊಮ್ಮೆ ಯಾವಾಗಲಾದರೂ ತೋರಿಸುತ್ತೇನೆ ನಿನಗೆ...' ಎಂದು ಗೊಣಗಿದ. ಅವಳ ಮನೆಯಲ್ಲಿದ್ದ ಹಂಗಿಗೆ ತನ್ನ ಬಾಯಿಕಟ್ಟಿ ಹೋಯಿತೇ ಅಥವಾ ಧೈರ್ಯ ಸಾಲಲಿಲ್ಲವೇ ಎಂದು ತಿಳಿಯದೇ ರಾಮಚಂದ್ರ ಒದ್ದಾಡಿದ. ಮರುದಿನ ಕೂಡ ನಾಗತ್ತೆ, 'ತೋರಿಸುತ್ತಾನಂತೆ... ಅದೇನು ಗೆಂಡೆ ತೋರಿಸುತ್ತಾನೋ ನೋಡ್ತೆ... ಏನೋ ನಮ್ಮವನೇ ಅಂತ ಹಚ್ಚಿಕೊಂಡದ್ದೇ ತಪ್ಪಾಯಿತು ಸಲಿಗೆ ಕೊಟ್ಟರೆ...' ಎಂದು ಕಾಲು ಕೆರೆದು ಜಗಳಕ್ಕೆ ಸರ್ವವಿಧದ ಸೂಚನೆ ಕೊಟ್ಟರೂ ರಾಮಚಂದ್ರ ಕಷ್ಟಪಟ್ಟು ತಡೆದುಕೊಂಡ.

★★★

ಕರೆಗಂಟೆಯ ಶಬ್ದಕ್ಕೆ ರಾಮಚಂದ್ರ ಗಡಬಡಿಸಿ ಎದ್ದ. ಅರೆ! ತಾನು ರೇವತಿಯ ಮಂಚದ ಮೇಲೆ ಮಲಗಿದ್ದೇಕೆ ಎಂದು ತಿಳಿಯದೇ ನಾಗತ್ತೆ ಬಂದುಗಿಂದಳೋ ಎಂದು ಆತಂಕಪಟ್ಟು ಬೆಡ್‌ಶೀಟ್ ಸರಿಪಡಿಸಿ ಮ್ಯಾಗಜೀನ್ ಒಂದನ್ನು ಕೈಯಲ್ಲಿ ಹಿಡಿದು ಓದುತ್ತ ಕೂತ ನಟನೆಗೆ ಸಿದ್ಧವಾಗಿ ಬಾಗಿಲು ತೆರೆದ. ಸೀತಾರಾಮ ಹಾಲು ಒಯ್ಯಲು ಬಂದಿದ್ದ. 'ರೇವತಿಗೆ ಈಗ ಪ್ರಜ್ಞೆ ಬಂತು. ಭಯಕ್ಕೇನೂ ಕಾರಣವಿಲ್ಲವೆಂದಿದ್ದಾರೆ ಡಾಕ್ಟರು. ಸಲಾಯಾನ್ ಕೊಟ್ಟಿದ್ದಾರೆ. ಆದರೂ ಯಾವುದಕ್ಕೂ ಇರಲಿ ಎಂದು ಹಾಲು ಒಯ್ಯಲು ಬಂದೆ' ಎಂದು ಮಾತಾಡುತ್ತಲೇ ಥರ್ಮಾಸಿಗೆ ಹಾಲು ತುಂಬಿಸಿಕೊಂಡ. 'ಸಂಜೆ ಸ್ವಲ್ಪ ಹೊತ್ತು ನೀನು ಆಸ್ಪತ್ರೆಗೆ ಬರಬೇಕಾದೀತು. ಸಾಧ್ಯವಾದರೆ ನಾಳೆ ರಜೆಹಾಕು. ನನಗಂತೂ ಈಗ ರಜೆ ಸಿಗಲಿಕ್ಕಿಲ್ಲ. ಜಾನಕಿ ಇರುತ್ತಾಳೆ. ಆದರೂ ಗಂಡಸು ಒಬ್ಬರಿದ್ದರೆ ಎಷ್ಟೋ ಧೈರ್ಯನೋಡು....' ಎಂದು ಗಂಡಸು ಜಾತಿಗೂ, ರಾಮಚಂದ್ರನಿಗೂ ಸೇರಿಸಿಯೇ ಪಂಪು ಹೊಡೆದು ಗಾಳಿ ಹಾಕಿ ಉಬ್ಬಿಸಿದ. ಸೀತಾರಾಮ ಹೋದ ನಂತರ ರಾಮಚಂದ್ರನಿಗೆ ಸಂಜೆ ತಾನು ಆಸ್ಪತ್ರೆಗೆ ಹೋದಾಗ ರೇವತಿಯ ಜತೆ ಏನು ಮಾತಾಡುವುದು? ಅವಳೇನಾದರೂ ಆಗಲೇ ಸೀತಾರಾಮನಿಗೆ ಎಲ್ಲವನ್ನೂ ಹೇಳಿಬಿಟ್ಟರೆ ಅನ್ನಿಸಿ ಅವಳಿಗಾದದ್ದು ಗರ್ಭಪಾತ ಹೌದೋ ಅಲ್ಲವೋ ಎಂದು ತೊಳಲಿದ. ಒಳಗೆ ಮತ್ತೆ ಆವತ್ತಿನ ಘಟನೆ.

ಮಧ್ಯಾಹ್ನ ರಾಮಚಂದ್ರ ಶಿಫ್ಟ್ ಮುಗಿಸಿ ಮೂರು ಗಂಟೆಗೆ ಬಂದ. ನಾಗತ್ತೆ ಎಂದಿನಂತೆ ಬಡಿಸಿದಳು. ನಂತರ 'ಮಠಕ್ಕೆ ಹೋಗುತ್ತೇನೆ ಬಾಗಿಲು ಹಾಕಿಕೊ' ಎಂದು ಹೇಳಿ ಹೋದಳು. ಅವಳು ಹೋದದ್ದೇ ಬಾಗಿಲು ಮುಚ್ಚಿ ಎಲ್ಲವನ್ನೂ ಯೋಚಿಸಿ ಇಟ್ಟ ಹಾಗೆ ಸೀದಾ ರೇವತಿಯ ಕೋಣೆಗೆ ಹೋದ. ಕುತ್ತಿಗೆಯವರೆಗೂ ಚಾದರ ಹೊದ್ದು ಅಂಗಾತ ಮಲಗಿದ್ದಳು. ಮಂಚದ ತುದಿಯಲ್ಲಿ ಕೂತ. ಮೇಲೆ ಮೆಲ್ಲಗೆ ಫ್ಯಾನು ತಿರುಗುತ್ತಿತ್ತು. ಅಂಥ ಉದ್ವೇಗವೇನೂ ತನ್ನೊಳಗೆ